**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1681/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಮರಪ್ಪ** | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಲೇಟ್ ಕೋತಯ್ಯ | ಚಾಸಾಃ 3 |
| ವಯಸ್ಸು | | 45 ವರ್ಷ | |
| ಕೆಲಸ | | ಕೂಲಿ ಕೆಲಸ | ಸಾ ಪ್ರ ಬೋ |
| ವಾಸ | | ಕವಲಂದೆ | ದಿಃ 05/07/2023 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿ ಗೊತ್ತು. ಚಾಸಾ-1 ಮತ್ತು 2 ಸುಮಾರು 1 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಚಾಸಾ-4 ಮತ್ತು 5 ಗೊತ್ತು. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ, ಕಾಂಪೋಂಡ್ ಗೋಡೆ ಬೀಳಿಸಿ ನಷ್ಟ ಬಡಿಸಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿನಾಂಕ 26.07.2018 ರಂದು ಸಂಜೆ 5.00 ಗಂಟೆ ಸಮಯದಲ್ಲಿ ದೊಡ್ಡ ಕವಲಂದೆ ಗ್ರಾಮದ ಚಾಸಾ-1 ರವರ ಸರ್ವೆ ನಂಬರ್ 2/1 ರ ಜಮೀನಿನಲ್ಲಿ ನಾನು ಮತ್ತು ಚಾಸಾ-2 ರವರು ಕಾಂಪೋಂಡ್ ನಿರ್ಮಾಣ ಮಾಡುತ್ತಿದ್ದಾಗ ಆರೋಪಿಯು ಏಕಾಏಕಿ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಬೋಳಿ ಮಗನೇ ಏಕೆ ಕಾಂಪೋಂಡ್ ನಿರ್ಮಾಣ ಮಾಡಿದ್ದೀಯಾ ಎಂದು ಹಿಡಿದು ಎಳೆದಾಡಿ ಕಟ್ಟಿದ್ದ ಕಾಂಪೋಂಡ್ ಗೋಡೆಯನ್ನು ಜಾಡಿಸಿ ತಳ್ಳಿ ಬೀಳಿಸಿ ಸುಮಾರು 2,000/- ರೂಗಳಷ್ಟು ನಷ್ಟ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮತ್ತು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 27.07.2018 ರಂದು ಈಗ ನನಗೆ ಓದಿ

ಹೇಳಿದಂತೆ "  ದೊಡ್ಡಕವಲಂದೆ ಗ್ರಾಮದ -------- ನೋಡಿದರೆ ಗುರುತಿಸುತ್ತೇನೆ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು. ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**